ಸಿ. ಸಿ. ನಂ. **2526/2019**

ಪಿ ಡಬ್ಲ್ಯೂಃ **1**

**ಸಾಕ್ಷಿಯು ದಿನಾಂಕಃ 17-12-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್., ವಕೀಲರಿಂದ</u>**

ನಾನು **3** ನೇ ತರಗತಿಯವರೆಗೂ ಓದಿರುತ್ತೇನೆ. ನಾನು ಆದಾಯವಿರುವ ಯಾವುದೇ ಕೆಲಸವನ್ನು ಮಾಡುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು, ನಾನು ಗೃಹಿಣಿ ಇರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡ ವಲಿಸಾಬರವರು **2005** ರಿಂದ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ಮಾಡುತ್ತಿದ್ದಾರೆ ಅಂದರೆ ಸರಿ. ನನ್ನ ಗಂಡ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ಮಾಡಿದಾಗ ಕೆಲವು ಸ್ವತ್ತುಗಳನ್ನು ಖರೀದಿಸಿ ಅವುಗಳನ್ನು ಮಾರಾಟ ಮಾಡುವುದು ಮಾಡುತ್ತಿದ್ದರು ಅಂದರೆ ಸರಿ. ನನ್ನ ಗಂಡ ಸಾಮಾನ್ಯವಾಗಿ ಸ್ವತ್ತುಗಳನ್ನು ಖರೀದಿಸುವುದಕ್ಕೂ ಮೊದಲು ದಾಖಲೆಗಳನ್ನು ಪರಿಶೀಲಿಸಿ ಸ್ವತ್ತುಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಖರೀದಿಸುತ್ತಿದ್ದರು ಅಂದರೆ ಸರಿಯಲ್ಲ. ಖರೀದಿ ಮಾಡುವುದಕ್ಕೂ ಮೊದಲು ಒಬ್ಬ ವ್ಯಕ್ತಿ ಸ್ವತ್ತಿನ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸುತ್ತಾನೆ ಅಂದರೆ ಸರಿ.

ನನ್ನ ಗಂಡ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದಾಗ ಆರೋಪಿ **2005** ರಲ್ಲಿ ಆತನ ಬಳಿ ಕೆಲಸಕ್ಕೆ ಇದ್ದ ಅಂದರೆ ಸರಿ. ಸದರಿ ವ್ಯವಹಾರಗಳ ಹಣ ಪಾವತಿ ಮಾಡುವುದು ಮತ್ತು ಮಾತುಕತೆ ಮಾಡುವುದು ಆರೋಪಿಯೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ಆರೋಪಿ ನನ್ನ ಗಂಡನ ಬಳಿ ತಿಂಗಳ ಸಂಬಳಕ್ಕಾಗಿ ದುಡಿಯುತ್ತಿದ್ದ ಅಂದರೆ ಸರಿ. ಆರೋಪಿಗೆ ನನ್ನ ಗಂಡ ನೀಡುತ್ತಿದ್ದ ಸಂಬಳದ ಹೊರತಾಗಿ ಆ ಸಮಯದಲ್ಲಿ ಬೇರೆ ಯಾವುದೇ ಆದಾಯ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ಪ್ರಕರಣದಲ್ಲಿನ ಸ್ವತ್ತನ್ನು ಖರೀದಿಸುವಾಗ ನನ್ನ ಗಂಡ ಅದರ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಿರುತ್ತಾರೆ ಅಂದರೆ ಸರಿಯಲ್ಲ.

ಸಿ. ಸಿ. ನಂ. **2526/2019**

ಪಿ ಡಬ್ಲ್ಯೂ: **1**

ಸದರಿ ಸ್ವತ್ತಿಗೆ ಸಂಬಂಧಿಸಿ ಹೂಡಾ ಪ್ರಾಧಿಕಾರದವರು ನನ್ನ ವಿರುದ್ಧ ಪ್ರಕರಣ ದಾಖಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. 2015-16 ರಲ್ಲಿ ನನ್ನ ಗಂಡನಿಗೆ ಮತ್ತು ಆರೋಪಿಗೆ ವ್ಯವಹಾರಗಳಿಗೆ ಸಂಬಂಧಿಸಿ ವ್ಯತ್ಯಾಸ ಬಂದಿದ್ದರಿಂದ ಆರೋಪಿ ಕೆಲಸಕ್ಕೆ ಬರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, 2012 ರಲ್ಲಿ ಹೂಡಾದವರು ನೋಟಿಸ್ ನೀಡಿದಾಗ ನಾನು ಆರೋಪಿಯನ್ನು ಪ್ರಶ್ನೆ ಮಾಡಿದ್ದರಿಂದ ಆತ ಕೆಲಸಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.